# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 190 ಗ್ರಾಪಂಕಾ 2015, ದಿನಾಂಕ 18.05.2015
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ/278/2015/ಎಆರ್‌ಇ-9, ದಿನಾಂಕ 24.07.2018
3) ಸರ್ಕಾರದ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸ್, ದಿನಾಂಕ 28.08.2018
4) ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ದಿನಾಂಕ 21.01.2019.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ, ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ವಿವಿಧ ಯೋಜನೆಗಳಡಿಯಲ್ಲಿ ಎಸಗಿರುವ ಅವ್ಯವಹಾರದ ಸಂಬಂಧ ಕೆಳಕಂಡ ಆರೋಪಗಳ ಮೇಲೆ ವಿಚಾರಣೆ ನಡೆಸಲು ಸರ್ಕಾರದಿಂದ ದಿನಾಂಕ 18.05.2015ರ ಸರ್ಕಾರದ ಆದೇಶದಲ್ಲಿ ಕ.ನಾ.ಸೇ.ನಿ.1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿದೆ.

"ಶ್ರೀ ಎಸ್.ಎ. ಕಾಂಬಳೆ ಇವರು ಕೋಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ

1) 2010-13ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳಲು ಆಯ್ಕೆ ಮಾಡಿದ ಫಲಾನುಭವಿಗಳಾದ ಶ್ರೀ ಸುರೇಶ್, ಶ್ರೀಮತಿ ಜಯಶ್ರೀ ಸಾಂಬಾಜಿ, ಶ್ರೀಮತಿ ರಾಜಶ್ರೀ, ಶ್ರೀಮತಿ ಮದೀನ ಮಕ್ತಾಂ ಮತ್ತು ಶ್ರೀಮತಿ ರೇಷ್ಮ ಅಥಾಮುಲ್ಲಾ ನದಾಫ್ ರವರು ಮನೆಗಳನ್ನು ಕಟ್ಟಿಕೊಳ್ಳದೆ ಇದ್ದರೂ ಸಹ ಅವರುಗಳಿಗೆ ಕ್ರಮವಾಗಿ ರೂ.15,000/-, ರೂ.75,000/-, ರೂ.15,000/-, ರೂ.50,000/- ಹಾಗೂ ರೂ.50,000/-ಗಳನ್ನು ಪಾವತಿ ಮಾಡಿರುತ್ತಾರೆ.
2) 2012-13ನೇ ಸಾಲಿನಲ್ಲಿ ಅಭಿವೃದ್ಧಿ ಅನುದಾನವೆಂದು 7ಜನ ಫಲಾನುಭವಿಗಳಿಗೆ ರೂ.56,000/- ಚೆಕ್ ಮೂಲಕ ವಿತರಣೆ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾಗಿರುತ್ತಾರೆ.
3) 2012-13ನೇ ಅವಧಿಯಲ್ಲಿ ರೂ.2,91,046/-ಗಳ ಸ್ಥಾನಿಕ ಕರ ಸಂಗ್ರಹಣೆ ಮಾಡಿದ ಬಗ್ಗೆ ದಾಖಲೆ ತೋರಿಸಿ ಅದರ ಪೈಕಿ ರೂ.2,90,921/-ಗಳನ್ನು ವೆಚ್ಚವೆಂದು ತೋರಿಸಿದ್ದು ಆ ಖರ್ಚಿಗೆ ಸಂಬಂಧಿಸಿದ ರಸೀದಿಗಳನ್ನು ಕಾರ್ಯಪಾಲಕ ಅಧಿಕಾರಿಗಳಿಗೆ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.
4) 13ನೇ ಹಣಕಾಸು ಅನುದಾನದಲ್ಲಿ ಪಡೆದ ರೂ.4,99,929/-ಗಳ ಪೈಕಿ ರೂ.4,47,000/-ಗಳನ್ನು ಖರ್ಚು ಮಾಡುವಲ್ಲಿ ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿರುವುದಿಲ್ಲ.
5) ರೂ.50,283/- ಮೊತ್ತದ ಎಲೆಕ್ಟ್ರಿಕ್ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಸದರಿ ಸಾಮಗ್ರಿಗಳನ್ನು ಸ್ಟಾಕ್ ರಿಜಿಸ್ಟರ್ ಅಥವಾ ಬಳಕೆ ರಿಜಿಸ್ಟರ್‌ನಲ್ಲಿ ದಾಖಲಿಸಿರುವುದಿಲ್ಲ.
6) ದಿನಾಂಕ 24.05.2012, ದಿನಾಂಕ 17.07.2012, ದಿನಾಂಕ 06.08.2012, ದಿನಾಂಕ 12.08.2012 ಹಾಗೂ ದಿನಾಂಕ 20.12.2012ರಂದು ನಡೆದ ಗ್ರಾಮಸಭೆಗಳಲ್ಲಿ ನಡೆದ ವಿಷಯಗಳ ವಿವರಗಳನ್ನು ಹಾಗೂ ಸಭೆಗಳ ನಡವಳಿಗಳನ್ನು ದಾಖಲಿಸಿರುವುದಿಲ್ಲ.
7) ಗ್ರಾಮದಲ್ಲಿ ನಾಲ್ಕು ತಿಂಗಳಿನಿಂದ ನೀರಿನ ಸಮಸ್ಯೆ ಇದ್ದರೂ ಸಹಿತ ತಾಲ್ಲೂಕು ಪಂಚಾಯತಿಯಿಂದ ಸಮಸ್ಯೆಯ ನಿವಾರಣೆಗೆ ಪಂಪ್ ಸೆಟ್ ರಿಪೇರಿ ಮಾಡಿಸಿ ಗೋದಿ ಭಾವಿಯಲ್ಲಿ ಲಭ್ಯವಿದ್ದ ನೀರು ಸರಬರಾಜು ಮಾಡುವ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದರೂಸಹ ಅಗತ್ಯ ಕ್ರಮ ತೆಗೆದುಕೊಳ್ಳದೆ ನಿರ್ಲಕ್ಷ್ಯ ತೋರಿದ್ದೀರಿ.

ಈ ಮೂಲಕ ನೀವು ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು(ನಡತೆ) 1966, ನಿಯಮ3()() ಮತ್ತು ()ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುತ್ತಾರೆಂದು ದೋಷಾರೋಪಣೆ ಮಾಡಲಾಗಿದೆ."

ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಅಪರ ನಿಬಂಧಕರು, ವಿಚಾರಣೆಗಳು-6 ರವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿದ್ದು, ತನಿಖೆ ಕೈಗೊಂಡು ವರದಿ ಸಲ್ಲಿಸಿರುತ್ತಾರೆ. ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿ ವರದಿಯನ್ವಯ ಮಾನ್ಯ ಉಪಲೋಕಾಯುಕ್ತರು ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ವೇತನ ಭತ್ಯೆಗಳಿಂದ ಪ್ರಕರಣದಲ್ಲಿ ದುರುಪಯೋಗವಾದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾದ ಮೊತ್ತ ರೂ.1,85,000/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸ್ ಜಾರಿಗೊಳಿಸಲಾಗಿ ಕೆಳಗಿನಂತೆ ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ಅಥಣಿ ತಾಲ್ಲೂಕು ಕೋಹಳ್ಳಿ ಗ್ರಾಮ ಪಂಚಾಯತಿಯಲ್ಲಿ ದಿನಾಂಕ 01.04.2012 ರಿಂದ 28.02.2013ರವರೆಗೆ ಕಾರ್ಯನಿರ್ವಹಿಸಿದ್ದು, 2010-13ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿ,

1. ಸುರೇಖಾ ಚಿದಾನಂದ ತಳಕೇರಿಗೆ ಮನೆ ನಿರ್ಮಿಸಿದ ಪ್ರಕಾರ ಮೊದಲನೆಯ ಹಂತದ ಯೋಜನೆಯ ಮಾರ್ಗಸೂಚಿ ಪ್ರಕಾರ ತಳಪಾಯ ತೆಗೆದ ಪ್ರಕಾರ ಪರಿಶೀಲಿಸಿ ರೂ.15,000/- ಸಂದಾಯ ಮಾಡಲಾಗಿದೆ.
2. ಶ್ರೀಮತಿ ಜಯಶ್ರೀ ಸಂಭಾಜಿ ಸೂರ್ಯವಂಶಿ ಇವರಿಗೆ 4 ಹಂತದ ಮನೆಗಳ ಪರಿಶೀಲಿಸಿ ಇಂದಿರಾ ಗಾಂಧಿ ಆವಾಜ್ ಯೋಜನೆಯ ಮಾರ್ಗಸೂಚಿ ಪ್ರಕಾರ ರೂ.15,000/-, 20,000/-, 20,000/- ರಂತೆ ಒಟ್ಟು ರೂ.75,000/-ಗಳನ್ನು ಯೋಜನೆಯ ಮಾರ್ಗಸೂಚಿ ಪ್ರಕಾರ ಚೆಕ್ ಮುಖಾಂತರ ಸಂದಾಯ ಮಾಡಿದೆ.
3. ಶ್ರೀಮತಿ ರಾಜಶ್ರೀ ವಿನೋದ ಪಾತ್ರೋಟ, ಇವರಿಗೆ ಇಂದಿರಾ ಆವಾಜ್ ಯೋಜನೆ ಮೊದಲನೆ ಹಂತದ ತಳಪಾಯ ರೂ.15,000/-ಗಳನ್ನು ಮಾತ್ರ ಚೆಕ್ ಮೂಲಕ ಸಂದಾಯ ಮಾಡಲಾಗಿದೆ.
4. ಶ್ರೀಮತಿ ಮದಿನಾ ಮಕ್ತುಮಸಾಬ ಮುಜಾವರ ಇವರಿಗೆ ನನ್ನ ಕಾರ್ಯಾವಧಿಯಲ್ಲಿ ಸದರಿ ಫಲಾನುಭವಿಗೆ ಚೆಕ್ ವಿತರಿಸಿರುವುದಿಲ್ಲ. ಏಕೆಂದರೆ ಕೋಹಳ್ಳಿ ಗ್ರಾಮ ಪಂಚಾಯತಿ ಪ್ರಭಾರವನ್ನು ಶ್ರೀ ಕೆ.ಪಿ.ಬೆಡರಟ್ಟಿ ಇವರಿಂದ ಚಾರ್ಜ್ ಪಟ್ಟಿ ತೆಗೆದುಕೊಂಡಿದರಲ್ಲಿ ಮನೆಗಳ ಕಡತಗಳನ್ನು ಕೊಟ್ಟಿರುವುದಿಲ್ಲ. ರೂ.30,000/- ಗಳಿಗೆ ನಾನು ಹೊಣೆಗಾರನಲ್ಲ. ವಸೂಲಾತಿಯಿಂದ ಕೈಬಿಡಲು ವಿನಂತಿಸಲಾಗಿದೆ.
5. ಶ್ರೀಮತಿ ರೇಷ್ಮಾ ಅಲ್ಲಾವುದ್ದೀನ ನದಾಫ ಇವರಿಗೆ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮಾರ್ಗಸೂಚಿ ಪ್ರಕಾರ ನಿಯಮಾನುಸಾರ ಚೆಕ್ ಮೂಲಕ ಹಣ ಸಂದಾಯ ಮಾಡಿದೆ.

ಈ ಮೇಲ್ಕಾಣಿಸಿದ ಫಲಾನುಭವಿಗಳಿಗೆ ಸಂದಾಯ ಮಾಡಿದ ಹಣದ ವಸೂಲಾತಿಯನ್ನು ಕೈಬಿಡಲು ವಿನಂತಿಸಲಾಗಿದೆ. ಅದರಂತೆ ಇನ್ನುಳಿದ ವಿಚಾರಣಾ ವರದಿಯಲ್ಲಿ ಹೊರಿಸಿದ ಆಪಾದನೆಗಳಲ್ಲಿ ಸಂಬಂಧಿಸಿದ ದಾಖಲಾತಿಗಳನ್ನು ವಿಚಾರಣಾಧಿಕಾರಿಗಳಿಗೆ ಹಾಜರುಪಡಿಸಲಾಗಿದೆ. ದಯವಿಟ್ಟು ನನ್ನ ಮೇಲೆ ಹೊರಿಸಿದ ಆಪಾದನೆಗಳಿಂದ ಮುಕ್ತಗೊಳಿಸಲು ಎಂದು ವಿನಂತಿಸುತ್ತಾರೆ."

ವಿಚಾರಣಾಧಿಕಾರಿಯವರು ಸಾಕ್ಷ್ಯಾಧಾರಗಳು, ಹೇಳಿಕೆಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ ಆರೋಪಗಳು ಸಾಬೀತಾಗಿರುವುದಾಗಿರುವ ಹಿನ್ನೆಲೆಯಲ್ಲಿ, ಸದರಿ ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ವೇತನ ಭತ್ಯೆಗಳಿಂದ ಪ್ರಕರಣದಲ್ಲಿ ದುರುಪಯೋಗವಾದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾದ ಮೊತ್ತ ರೂ.1,85,000/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಸದರಿ ನೌಕರರುಗಳಿಗೆ ಮೇಲ್ಕಂಡ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ವೇತನ ಭತ್ಯೆಗಳಿಂದ ಪ್ರಕರಣದಲ್ಲಿ ದುರುಪಯೋಗವಾದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾದ ಮೊತ್ತ ರೂ.1,85,000/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 411 ಗ್ರಾಪಂಕಾ 2018, ಬೆಂಗಳೂರು, ದಿನಾಂಕ: 12.03.2019**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಪಾವತಿಸಲಾಗುವ ವೇತನ ಭತ್ಯೆಗಳಿಂದ ಪ್ರಕರಣದಲ್ಲಿ ದುರುಪಯೋಗವಾದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾದ ಮೊತ್ತ ರೂ.1,85,000/-ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/3/19
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
6) ಕಾರ್ಯನಿರ್ವಾಹಕ ಅಧಿಕಾರಿ, ಅಥಣಿ ತಾಲ್ಲೂಕು ಪಂಚಾಯತಿ, ಅಥಣಿ, ಬೆಳಗಾವಿ ಜಿಲ್ಲೆ.
7) ಶ್ರೀ ಎಸ್.ಎ. ಕಾಂಬಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕೋಹಳ್ಳಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.